ಕ್ರಮ ಸಂಖ್ಯೆ	ಜಿಲ್ಲೆಗಳು	ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ
13.	ಉಡುಪಿ	16
14.	ಚಾಮರಾಜನಗರ	72
15.	ಮಡಿಕೇರಿ	19
16.	ಗುಲ್ಬರ್ಗಾ	210
17.	ಬಿಜಾಪುರ	1049
18.	ಬಾಗಲಕೋಟೆ	566
19.	ಬಳ್ಳಾರಿ	546
20.	ರಾಯಚೂರು	283
21.	ಧಾರವಾಡ	819
22.	ಗದಗ	105
23.	ಹಾವೇರಿ	57
24.	ಉತ್ತರಕನ್ನಡ (ಕಾರವಾರ)	190
25.	ಕೊಪ್ಪಳ	63
26.	ಬೆಳಗಾಂ	882
27.	ಬೀದರ್	145
28.	ಹೊರನಾಡು	24
	ಒಟ್ಟು	**11,415**

2279(2059) ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಲಕೋಟೆ):– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸದಸ್ಯರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳ ಮೂಲಕ ನೀರಾವರಿ ಗೊಳಪಡುವ ಪ್ರದೇಶದ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಇ) ಈ ಕೆರೆಗಳ ಹೊಳೆತ್ತುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;

ಈ) ಹೌದಾದಲ್ಲಿ, ಎಷ್ಟು ಕೆರೆಗಳ ಹೂಳನ್ನು ಎತ್ತಲಾಗಿದೆ;

ಉ) ಉಳಿದ ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದಿತ;

ಶ್ರೀ ಮಲ್ಲಿಕಾರ್ಜುನ ಖರ್ಗೆ:– (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):–

ಅ) 42

ಆ) ಬಾಗಲಕೋಟೆ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆವತಿಯಿಂದ ಕೆರೆಗಳ ಮೂಲಕ ನೀರಾವರಿ ಪ್ರದೇಶದ ವಿಸ್ತೀರ್ಣ ಈ ಕೆಳಗಿನಂತೆ ಇರುತ್ತವೆ.

ಕ್ರ. ಸಂ.	ತಾಲ್ಲೂಕು	ಕೆರೆಗಳ ಸಂಖ್ಯೆ	ಅಚ್ಚುಕಟ್ಟು ಕ್ಷೇತ್ರ (ಹೆ.ಗಳಲ್ಲಿ)
1.	ಬಾಲಕೋಟೆ	4	1759
2.	ಬಾದಾಮಿ	13	2475
3.	ಹುನುಗುಂದ	9	4279
4.	ಮುಧೋಳ	4	890
5.	ಜಮಖಂಡಿ	9	1081
6.	ಬೀಳಗಿ	3	305
	ಒಟ್ಟು	**42**	**10789**

ಇ) ರೈತ ಕಾಯಕ ಕೆರೆ ಯೋಜನೆಯಡಿ 6 ಕೆರೆಗಳಲ್ಲಿ, ಬರಪರಿಹಾರ ಕಾಮಗಾರಿ ಯೋಜನೆಯಡಿ 20 ಕೆರೆಗಳಲ್ಲಿ ಮತ್ತು ಜಲ ಸಂವರ್ಧನೆ ಯೋಜನಾ ಸಂಘದ ಅಡಿ 16 ಕೆರೆಗಳಲ್ಲಿ ಭಾಗಶ: ಹೂಳನ್ನು ತೆಗೆಯಲಾಗಿದೆ.

ಈ) ಅನುದಾನದ ಲಭ್ಯತೆ ಮೇಲೆ ಪರಿಶೀಲಿಸಲಾಗುವುದು.

2280(2060) ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಲಕೋಟೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಗಮ ಕ್ರಾಸ್‌ನಿಂದ ಆಲಮಟ್ಟಿಯವರೆಗೆ ಇರುವ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯ ರಸ್ತೆಯು ತೀರಾ ಅವ್ಯವಸ್ಥಿತವಾಗಿದ್ದು, ಅದನ್ನು ದುರಸ್ತಿಗೊಳಿಸಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು;

ಆ) ಸದರಿ ರಸ್ತೆಯನ್ನು ಶೀಘ್ರಗತಿಯಲ್ಲಿ ದುರಸ್ತಿಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ&ಆ)ಸದರಿ ರಸ್ತೆ ಅವ್ಯವಸ್ಥಿತವಾಗಿದ್ದು, ತುರ್ತು ದುರಸ್ತಿಗಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಡಿಯಲ್ಲಿ ಹಣ ಮಂಜೂರಾತಿ ಮಾಡಲಾಗಿದ್ದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

2281(3017) ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಲಘಟಗಿ ತಾಲ್ಲೂಕಿನಲ್ಲಿ ಬಾಂದಾರ ಹಾಗೂ ಏತ ನೀರಾವರಿ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;